ಶೆಂಬಾಯಿಅಪ್ಪತ್ತಾ ಮನೆಯಿಂದ ಹೊರಡುವಾಗ ಮೆಲ್ಲಗೆ ಮಾತನಾಡುತ್ತಾ, ನನ್ನನ್ನು ಹಿಂಬಾಲಿಸುವರು. 'ನಾನು ಬರ್ತೀನಿ ಅಪ್ಪತ್ತಾ' ಎಂದು ಹೇಳುವಾಗ, ಶೆಂಬಾಯಿಅಪ್ಪತ್ತಾ ಅಡುಗೆಮನೆಯ ಎದುರಿನ ಕೋಣೆಯಿಂದ ಒಂದು ಹೆಣ್ಣುತಲೆ ಇಣಕಿ ನೋಡುವುದು. ಅದನ್ನು ಶೆಂಬಾಯಿಅಪ್ಪತ್ತಾ ಸಹ ನೋಡುವರು. ಆ ಸಮಯದಲ್ಲಿ ಒಂದು ಪುಟ್ಟ ಗರ್ವದ ನಗೆ ಅವರ ತುಟಿಯಿಂದ ಚಿಮ್ಮುವುದು. ತಕ್ಷಣ ಆ ತಲೆ ತನ್ನನ್ನು ಒಳಗೆಳೆದುಕೊಳ್ಳುವುದು. ಅಪ್ಪತ್ತಾ ಹೊಸ್ತಿಲವರೆಗೆ ಬಂದು ನನ್ನನ್ನು ಬೀಳ್ಕೊಟ್ಟು ಹಿಂತಿರುಗುವರು. ನಂತರ ಆ ಮನೆಯ ಏಕಾಂತದಲ್ಲಿ ಅವರು ಮರೆಯಾಗಿ ಹೋಗುವರು ಎಂದು ಅಂದುಕೊಳ್ಳುವೆನು.

ಆನಂತರ ಮತ್ತೆ ಊರಿಗೆ ಹೋಗಿ ಮರಳುವಾಗಲೇ ಶೆಂಬಾಯಿಅಪ್ಪತ್ತಾರನ್ನು ನೋಡಲು ಸಾಧ್ಯ. ತಿಂಗಳುಗಟ್ಟಲೆ ಆಗುವುದು. ಆ ಇಣಕಿ ನೋಡುವ ತಲೆಯ ಬಗ್ಗೆ ಅಮ್ಮನ ಬಳಿ ಕೇಳಿದ್ದೇನೆ. 'ಅವರೇ ಶೆಂಬಾಯಿಅಪ್ಪತ್ತಾರ ಸವತಿ ಅಂತೆ. ಅಂದರೆ 'ಶೆಂಬಾಯಿಅಪ್ಪತ್ತಾರ ಗಂಡನಿಗೆ ತಂದ ಎರಡನೆಯ ಹೆಂಡತಿಯಂತೆ. ಅವಳು ಚಿಕ್ಕ ಮನೆಯವಳಂತೆ. ಶೆಂಬಾಯಿ ಅಪ್ಪಾತ್ತಾಗೆ ಇರುವಂತೆ ಗೌರವ ಇಲ್ಲವಂತೆ. ಎರಡನೆಯ ಹೆಂಡತಿ ಆದ್ದರಿಂದ ಸಂಬಂಧ ಕೂಡಿಬಂತಂತೆ.'

ಯಾವ ರೀತಿಯಲ್ಲಿಯೂ ಶೆಂಬಾಯಿಅಪ್ಪತ್ತಾ ಸಮೀಪಕ್ಕೂ ಸಹಾ ಆಕೆ ಬರಲಾರಳು. ಒಂದೆರಡು ಸಲ ಶೆಂಬಾಯಿಅಪ್ಪತ್ತಾ ಗಂಡನನ್ನು ನೋಡಿದ್ದೇನೆ. ಸೈಕಲ್ಲಿನೊಂದಿಗೆ ಒಳಗೆ ಬರುವರು. ಶೆಂಬಾಯಿಅಪ್ಪತ್ತಾ, ಅವರೊಂದಿಗೆ ಇದ್ದದ್ದನ್ನೋ, ಮಾತನಾಡಿದ್ದನ್ನೋ ನೋಡಿಲ್ಲ. ಅವರೇ ಮಾತನಾಡದಿರುವಾಗ ಅವರೊಂದಿಗೆ ನನಗೇನೂ ಮಾತು ಎಂಬಂತೆ ನಾನು ಮಾತನಾಡದೆ ಹೊರಡುವೆನು. ಅವರು ಸೀದಾ ಒಳಗೆ ಹೋಗಿ ಆ ಹೆಣ್ಣಿರುವ ಕೊಠಡಿಗೆ ನುಸುಳುವುದನ್ನು ನೋಡಿದ್ದೇನೆ. ಒಂದು ದೊಡ್ಡ ಗೂಡಿನೊಳಗೆ ಬಿಡಿಬಿಡಿಯಾದ ಗೂಡುಗಳು. ನಮ್ಮ ಮನೆಯಂತೆ ಎಲ್ಲರೂ ಒಂದಾಗಿ ಕುಳಿತು ಒಂದೇ ಛಾವಣಿಯ ಕೆಳಗೆ ಮಲಗುವ ಭಾಗ್ಯ ಅವರಿಗೆ ದೊರಕದು ಎಂಬುದನ್ನು ನೆನೆಯುವಾಗ ಅವರ ಮೇಲೆ ಪರಿತಾಪ ಉಂಟಾಗುವುದು.

ಆದರೆ, ಇದಕ್ಕೆಲ್ಲಾ ತದ್ವಿರುದ್ಧ, ಶೆಂಬಾಯಿಅಪ್ಪತ್ತಾರ ತಾಯಿ ಮನೆ. ಸದಾ ಜನಗಳಿಂದ ಗಿಜುಗುಡುವುದು. ತುಂಬಾ ಜನ ಬಂದುಹೋಗುವರು. ರಾತ್ರಿಯಲ್ಲಿಯೂ ಸಹಾ ಅವರ ಮನೆಯ ಬಾಗಿಲು ಮುಚ್ಚಿರುವುದನ್ನು ನೋಡಿಲ್ಲ. ಬಹುಶಃ ಮಲಗುವಾಗ ಮಾತ್ರ ಮುಚ್ಚುವಂತೆ ಕಾಣುತ್ತದೆ. ಅಲ್ಲೂ ಸಹಾ ಶೆಂಬಾಯಿಅಪ್ಪತ್ತಾಗೆಂದು ಪ್ರತ್ಯೇಕ ಕೊಠಡಿ ಇರುವುದು. ಅಮ್ಮನೊಂದಿಗೆ ಆ ಊರಿಗೆ ಹೋಗುವಾಗ, ಅಮ್ಮನ, 'ಅಪ್ಪನಮನೆಗೆ' ಅಮ್ಮನೊಂದಿಗೆ ಹೋಗುವೆನು. ತಮಾಷೆ ನೋಡುವಂತೆ ಸ್ವಲ್ಪಹೊತ್ತು ಮಾತನಾಡುತ್ತಿರುವವರನ್ನು ನೋಡುವೆನು. ನಂತರ ಆ ಮನೆ ಮಹಡಿಯ ಕೊಠಡಿಗೆ ಹೋಗುವರು. ಗುಂಡುಬಲ್ಬಿನ ಬೆಳಕಿನಲ್ಲಿ ಹಲವಾರು ಪೆಟ್ಟಿಗೆಗಳು ಇರುವವು. ಪ್ರತ್ಯೇಕವಾಗಿ ಅನೇಕ ಪಾತ್ರೆಗಳು ಮತ್ತಿತರ ವಸ್ತುಗಳು ಇರುತ್ತಿದ್ದವು. ಒಳಗಿಂದ ಉಂಟಾಗುವ ಆ ದಗೆಯೂ ಶೆಂಬಾಯಿಅಪ್ಪತ್ತಾರ ಸ್ಯಾಂಡಲ್ ಸುಗಂಧವೂ ಮಲ್ಲಿಗೆಯ ಪರಿಮಳವೂ ಬೆವರಿನೊಂದಿಗೆ ಕಲೆತ ಸೋಪಿನ ವಾಸನೆಯೂ ಬೀರೂವನ್ನು ತೆರೆಯುವಾಗ ಅಲ್ಲಿಂದ ಬರುವ ನೆಫ್ತಾಲಿನ್ ಉಂಡೆಗಳ ವಾಸನೆಯೂ ಬೆರೆತು ಮತ್ತೇರಿದಂತಾಗುವುದು. ಅಲ್ಲಿಂದ ತೆಗೆದು ಒಂದು ಬಳುವಳಿಯನ್ನು ಕೊಡುವರು. 'ನಿನ್ನ ಅಮ್ಮನಿಗೆ ತಿಳಿಯುವುದು ಬೇಡ' ಎಂದು ನನ್ನನ್ನು ಪಕ್ಕಕ್ಕೆ ಕರೆದು ಕೊಡುವರು. ಆಗ ಅವರ ಕಣ್ಣನ್ನು ದಿಟ್ಟಿಸಿ ನೋಡಿರುವೆನು. ಅಬ್ಬಾ! ಎಂತಹ ಅಯಸ್ಕಾಂತದ ತುಂಡುಗಳು ಅವು. ಕೊಟ್ಟ ಬಳುವಳಿ ಏನೆಂದು ನೋಡಲೂ ಸಹಾ ತೋಚದು. ಎಲ್ಲ ಒಂದೆರಡು ನಿಮಿಷಗಳಷ್ಟೇ. ಕೆಲವು ಕ್ಷಣಗಳಲ್ಲಿ ಇಬ್ಬರೂ ಏನೂ ನಡೆಯದಂತೆ ಮಿಕ್ಕವರೊಂದಿಗೆ ಐಕ್ಯವಾಗಿಬಿಡುವೆವು.